156ನೇ೬ ನಿ-72 - (128)
4RR
0309

## ಕರ್ನಾಟಕ ವಿಧಾನ ಪರಿಷತ್ತು

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ರವರು ನಿಯಮ - 72ರಲ್ಲಿ ಪ್ರಸ್ತಾಪಿಸಿರುವ ಕುರಿತು.

**ಪ್ರಶ್ನೆ:**

ಮಂಗಳೂರು ವಿಶ್ವವಿದ್ಯಾಲಯದ ಈ ಹಿಂದಿನ ಕುಲಪತಿಯವರ ಅವಧಿಯಲ್ಲಿ ಗುತ್ತಿಗೆ ಹಾಗೂ ತಾತ್ಕಾಲಿಕ ನೆಲೆಯಲ್ಲಿ ಮಾಡಲಾದ ಸಿಬ್ಬಂದಿ ನೇಮಕಾತಿಯು ವಿಶ್ವವಿದ್ಯಾನಿಲಯಕ್ಕೆ ಸುಮಾರು 30 ಕೋಟಿ ರೂಪಾಯಿಗಳಷ್ಟು ಆರ್ಥಿಕ ಹೊರೆಗೆ ಕಾರಣವಾಗಿದೆ. 2018ರಿಂದ 2023ರ ಅವಧಿಯಲ್ಲಿ ತಾತ್ಕಾಲಿಕ ಮತ್ತು ಹೊರಗುತ್ತಿಗೆ ಆಧಾರದಲ್ಲಿ ಲಭ್ಯವಿದ್ದ ಹುದ್ದೆಗಳ ಸಂಖ್ಯೆ ಮೀರಿ ಅಂದರೆ 359 ಮಂದಿಯನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಆದರೆ ಈ ನೇಮಕಾತಿಯ ಬಗ್ಗೆ ಅಂದಿನ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಅಥವಾ ರಾಜ್ಯ ಸರಕಾರದಿಂದ ಅಂಗೀಕಾರ ಪಡೆಯುವುದಾಗಲಿ ನಡೆದಿಲ್ಲ ಎಂದು ಮಂಗಳೂರು ವಿವಿಯ ಹಾಲಿ ಸಿಂಡಿಕೇಟ್ ಸದಸ್ಯ ರಘುರಾಜ್ ಆಪಾದಿಸಿದ್ದಾರೆ. ಇದಲ್ಲದೇ ಅನುದಾನವನ್ನು ಉದ್ದೇಶಿತ ಕಾರ್ಯಕ್ಕೆ ಮಾತ್ರ ಬಳಸಲು ಸರ್ಕಾರದ ನಿರ್ದೇಶನವಿದ್ದರೂ ಆದೇಶವನ್ನು ಉಲ್ಲಂಘಿಸಿ ಇತರೇ ಚಟುವಟಿಕೆಗಳಿಗೆ ಮಾರ್ಗ ಪಲ್ಲಟ ಮಾಡಿರುವ ಬಗ್ಗೆ ಆಪಾದನೆಗಳಿವೆ. **ಮಂಗಳೂರು ವಿಶ್ವವಿದ್ಯಾಲಯದ ಎಲ್ಲಾ ಲೋಪಗಳ ಬಗ್ಗೆ ಕಾರಣೀಕರ್ತರಾದ ಆಡಳಿತ ಮುಖ್ಯಸ್ಥರು ಹಾಗೂ ಅಧಿಕಾರಿಗಳ ಮೇಲೆ ತನಿಖೆ ನಡೆಸಿ ಸೂಕ್ತ ಕ್ರಮಕ್ಕೆಗೊಳ್ಳುವ** ವಿಷಯದ ಕುರಿತು ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳ ಗಮನ ಸೆಳೆಯಲು ಬಯಸುತ್ತೇನೆ.

**ಉತ್ತರ:**

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 2018 ರಲ್ಲಿ ಗ್ರೂಪ್ ಸಿ & ಡಿ ವೃಂದದಲ್ಲಿ 213 ಹುದ್ದೆಗಳು, 2019 ರಲ್ಲಿ 235, 2020 ರಲ್ಲಿ 260, 2021 ರಲ್ಲಿ 287, 2022 ರಲ್ಲಿ 302 ಮತ್ತು 2023 ರಲ್ಲಿ 315 ಹುದ್ದೆಗಳು ಖಾಲಿ ಇದ್ದು, ಕಾರ್ಯಭಾರಕ್ಕನುಗುಣವಾಗಿ 2023 ರ ಕೊನೆಯಲ್ಲಿ ಒಟ್ಟು 359 ಹೆಚ್ಚುವರಿ ಹೊರಗುತ್ತಿಗೆ /ತಾತ್ಕಾಲಿಕ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದರು. ಪ್ರಸ್ತುತ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಗ್ರೂಪ್ ಸಿ & ಡಿ ವೃಂದದಲ್ಲಿ ಮಂಜೂರಾಗಿರುವ 471 ಹುದ್ದೆಗಳಲ್ಲಿ 329 ಹುದ್ದೆಗಳು ಖಾಲಿ ಇದ್ದು ಹೊರಗುತ್ತಿಗೆ ಹಾಗೂ ತಾತ್ಕಾಲಿಕ ನೆಲೆಯ ಒಟ್ಟು 364 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಪ್ರಕರಣ 56ರಲ್ಲಿ ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಉಪನ್ಯಾಸಕರು ಮತ್ತು ಬೋಧಕೇತರ ಸಿಬ್ಬಂದಿ ಹುದ್ದೆಗಳಿಗೆ ಒಂದು ವರ್ಷಕ್ಕೆ ಹೆಚ್ಚಾಗದಂಥ ಅವಧಿಗೆ ವಿಳಂಬವಿಲ್ಲದೇ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಮತ್ತು ಪರಿನಿಯಮಗಳ ಮೂಲಕ ನಿಯಮಿಸಲಾದ ವಿಧಾನದಲ್ಲಿ ತಾತ್ಕಾಲಿಕ ನೇಮಕಾತಿಗಳನ್ನು ಮಾಡತಕ್ಕದ್ದೆಂದು ಕುಲಪತಿಯವರಿಗೆ ಅಧಿಕಾರ ಪ್ರದತ್ತವಾಗಿರುತ್ತದೆ.

ವಿಶ್ವವಿದ್ಯಾನಿಲಯದಲ್ಲಿ ನಡೆದಿದೆ ಎನ್ನಲಾದ ಹಗರಣಗಳಿಗೆ ಸಂಬಂಧಿಸಿದಂತೆ, ವಿಶೇಷ ಲೆಕ್ಕ ಪರಿಶೋಧನಾ ವರದಿಯ ಆಧಾರದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತನಿಖೆ ನಡೆಸಲು ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ತನಿಖಾ ಸಮಿತಿಯು ತನಿಖೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.

ಬೆಳಪು ಯೋಜನೆಗೆ ಸಂಬಂಧಿಸಿದಂತೆ ಸರ್ಕಾರವು ರೂ.38.34 ಕೋಟಿ ಮೊತ್ತವನ್ನು ಬಿಡುಗಡೆಗೊಳಿಸಿದ್ದು ಇದರಲ್ಲಿ ರೂ. 30.50 ಕೋಟಿ ಮೊತ್ತವನ್ನು ಕರ್ನಾಟಕ ಗೃಹ ಮಂಡಳಿಗೆ ಪಾವತಿಸಲಾಗಿರುತ್ತದೆ. ಉಳಿದ ಅನುದಾನದಲ್ಲಿ ರೂ. 7.5 ಕೋಟಿ ಮೊತ್ತವನ್ನು ಅಂತರಾಷ್ಟ್ರೀಯ ವಸತಿನಿಲಯದ ಕಟ್ಟಡ ಕಾಮಗಾರಿಗೆ ಬಳಸಿಕೊಳ್ಳಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ, ತನಿಖೆ ನಡೆಸಲು ಮಂಗಳೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ನಿಂದ ದಿನಾಂಕ: 25.08.2025ರಂದು ಉಪ ಸಮಿತಿಯ ರಚಿಸಿದ್ದು ಸದರಿ ಸಮಿತಿಯು ತನಿಖೆ ನಡೆಸುತ್ತಿದೆ

**ಸಂಖ್ಯೆ: ಇಡಿ/92/ಯುಡಿವಿ/2025**

(ಡಾ. ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು